ನವದೆಹಲಿಯ ಕರ್ನಾಟಕ ಭವನದಲ್ಲಿ ರಾಣಿ ಚೆನ್ನಮ್ಮನ ವಿಗ್ರಹ.

೪೩೧ (೧೫೫) ಆರ್. ಪಿ. ಬಾಳೇಕುಂದರಗಿ (ಬೈಲಹೊಂಗಲ) ಮತ್ತು ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್ (ಸಂಕೇಶ್ವರ)

ಈ ಕೆಳಕಂಡ ಪ್ರಶ್ನೆಗಳಿಗೆ ಮಾನ್ಯ ಮುಖ್ಯಮಂತ್ರಿಗಳು ದಯವಿಟ್ಟು ಉತ್ತರಿಸುವರೆ ?

(೧) ದೆಹಲಿಯಲ್ಲಿ ಕರ್ನಾಟಕ ಭವನ ಬಡಾವಣೆಯಲ್ಲಿ ರಾಣಿ ಚೆನ್ನಮ್ಮನ ಪುತ್ಥಳಿಯನ್ನು ಸ್ಥಾಪಿಸಲು ಸರ್ಕಾರದವರು ಕೈಗೊಂಡ ಕ್ರಮಗಳೇನು ?

(೨) ೨೩ನೇ ಆಕ್ಟೋಬರ್ ೧೯೮೨ರಂದು ಆಗಿನ ಮುಖ್ಯ ಮಂತ್ರಿಗಳು ಬೆಳಗಾವಿಗೆ ಬಂದಾಗ ಕಿತ್ತೂರಿನಲ್ಲಿ ಹಾಗೂ ಬೆಂಗಳೂರಿನಲ್ಲಿ ರಾಣಿ ಚೆನ್ನಮ್ಮನ ಪುತ್ಥಳಿಯನ್ನು ಸ್ಥಾಪಿಸಲು ಆಶ್ವಾಸನೆ ಕೊಟ್ಟದ್ದು ನಿಜವೇ ?

(೩) ಹಾಗಿದ್ದಲ್ಲಿ ಈ ಭರವಸೆಯನ್ನು ಈಡೇರಿಸಲು ಸರ್ಕಾರದವರು ಕೈಗೊಂಡ ಕ್ರಮಗಳೇನು ?

ಶ್ರೀ ರಾಮಕೃಷ್ಣ ಹೆಗಡೆ.—(ಮುಖ್ಯಮಂತ್ರಿಗಳು)

ಸರ್ಕಾರದ ಪರಿಶೀಲನೆಯಲ್ಲಿದೆ.

೨೫-೧೦-೧೯೮೨ರಲ್ಲಿ ಆಶ್ವಾಸನೆ ಕೊಟ್ಟಿರುವುದು ನಿಜ.

ಸರಕಾರದ ಪರಿಶೀಲನೆಯಲ್ಲಿದೆ.

ಶ್ರೀ ಎಂ. ಎಸ್. ಪಾಟೀಲ್.—ಸನ್ಮಾನ್ಯ ಅಧ್ಯಕ್ಷರೇ, ರಾಣಿ ಚೆನ್ನಮ್ಮನ ಬಗ್ಗೆ ಹೆಚ್ಚಿಗೆ ಹೇಳ ಬೇಕಾದ ಆವಶ್ಯಕತೆಯಿಲ್ಲವೆಂದು ಭಾವಿಸಿದ್ದೇನೆ. ಆದರೆ ಈ ಒಂದು ನಿರ್ಣಯವನ್ನು ತಾವು ಬೇಗನೆ ತೆಗೆದುಕೊಂಡರೆ ಒಳ್ಳೆಯದು. ಇದು ಒಂದು ಜನಸಾಮಾನ್ಯರ ಬಯಕೆ ಇದೆ. ಈ ಬಯಕೆಯನ್ನು ಆದಷ್ಟು ಬೇಗ ಪೂರೈಸಬೇಕು. ಕರ್ನಾಟಕ ಭವನದ ಎದುರಿಗೆ ರಾಣಿ ಚೆನ್ನಮ್ಮನ ಪುತ್ಥಳಿಯನ್ನು ಹಾಕುತ್ತೀರಾ. ಆಕ್ಟೋಬರ್ ೨೩ ರಂದು ಆಗಿನ ಮುಖ್ಯ ಮಂತ್ರಿಗಳು ಭರವಸೆ ಕೊಟ್ಟಿದ್ದಾರೆ. ವಿಧಾನ ಸೌಧದ ಎದುರಿಗೆ ರಾಣಿ ಚೆನ್ನಮ್ಮನ ಪುತ್ಥಳಿಯನ್ನು ಹಾಕುತ್ತೇವೆಂದು ಮುಖ್ಯ ಮಂತ್ರಿಗಳು ಹೇಳಿದ್ದಾರೆ. ಮತ್ತು ರಾಣಿ ಚೆನ್ನಮ್ಮನ ಊರಿನಲ್ಲಿ ಒಂದು ಪುತ್ಥಳಿಯನ್ನು ಸ್ಥಾಪನೆ ಮಾಡುವುದಕ್ಕೆ ಈಗಾಗಲೇ ಕಾರ್ಯಕ್ರಮವಿದೆ ಎಂದು ಉತ್ತರದಲ್ಲಿ ಹೇಳಿದ್ದೀರಿ. ಇದರ ಬಗ್ಗೆ ಆದಷ್ಟು ಬೇಗ ನಿರ್ಣಯ ತೆಗೆದುಕೊಳ್ಳುವುದು ಒಳ್ಳೆಯದು. ಮತ್ತು ರಾಣಿ ಚೆನ್ನಮ್ಮನ ವಂಶಜರಿಗೆ ಪೆನ್‌ಷನ್ ಕೊಡ ಬೇಕೆಂದು ಸರ್ಕಾರಕ್ಕೆ ಹಲವಾರು ಸಲ ಮನವಿಗಳನ್ನು ಸಲ್ಲಿಸಿದರೂ ಇಲ್ಲಿಯವರೆಗೆ ಸರ್ಕಾರ ನಿರ್ಣಯ ಮಾಡಿಲ್ಲ. ಈಗ ಜವಿಾನು ಕೊಟ್ಟಿದ್ದೀರಿ, ಅದು ಗುಡ್ಡಗಾಡು ಪ್ರದೇಶದಲ್ಲಿರುವುದರಿಂದ ಉಪಯೋಗ ಬರುವುದಿಲ್ಲ. ಮಾನ್ಯ ಮುಖ್ಯ ಮಂತ್ರಿಗಳಲ್ಲಿ ಸದನದ ಪರವಾಗಿ ಕೇಳಿಕೊಳ್ಳುತ್ತೇನೆ. ರಾಣಿ ಚೆನ್ನಮ್ಮನ ವಂಶಜರಿಗೆ ದಯವಾಡಿ ೫ ರೂಪಾಯಿಯೋ, ಅಥವಾ ೧೦ ರೂಪಾಯಿಯೋ ಪೆನ್‌ಷನ್ ಕೊಡಿ, ಇಷ್ಟೇ ಕೊಡಬೇಕು ಎಂದು ಒತ್ತಾಯ ಮಾಡುವುದಿಲ್ಲ, ಒಟ್ಟಿನಲ್ಲಿ ಪೆನ್‌ಷನ್ ಕೊಡಬೇಕೂ ಎಂದು ಕೇಳಿಕೊಳ್ಳುತ್ತೇನೆ. ತಾವು ಪುತ್ಥಳಿಯನ್ನು ನಿರ್ಮಾಣಮಾಡುವುದಾದರೆ ಕಾವೇರಿ ಭವನದ ಎದುರಿಗೆ ಏನು ಮಾಡಿದ್ದಾರೆ ಅರೀತಿ ಬೇರೆ ರಾಜ್ಯದ ಪ್ರತಿಮೆ ಬರಬಾರದು ನಮ್ಮ ಕರ್ನಾಟಕದ ಭಾವಚಿತ್ರ ಅದರಲ್ಲಿರಬೇಕು ಎಂದು ಕೇಳಿಕೊಳ್ಳುತ್ತೇನೆ.

ಶ್ರೀ ರಾಮಕೃಷ್ಣ ಹೆಗಡೆ.—ಮಾನ್ಯ ಅಧ್ಯಕ್ಷರೆ, ಪುತ್ಥಳಿಗಳನ್ನು ಎಲ್ಲೆಲ್ಲಿ ಯಾರು ಯಾರದ್ದು ಎಷ್ಟು ಸಂಖ್ಯೆಯಲ್ಲಿ ಸ್ಥಾಪಿಸಬೇಕು ಎಂದು ಹೇಳುವುದರ ಬಗ್ಗೆ ಮತಬೇಧ ಇರಬಹುದು. ಆದರೆ ಕಿತ್ತೂರು ರಾಣಿ ಚೆನ್ನಮ್ಮನ ಕೊಡುಗೆ ಬಗ್ಗೆ ಇತಿಹಾಸದಲ್ಲಿ ಪ್ರತ್ಯೇಕವಾದಂಥ ವಿಶಿಷ್ಟ ಸ್ಥಾನವಿದೆ, ಆದರ ಬಗ್ಗೆ ಮತಬೇಧವಿಲ್ಲ. ಹಿಂದಿನ ಮುಖ್ಯ ಮಂತ್ರಿಗಳಿಗೆ ತ್ರೀಮಾನ್ ಸಿದ್ದವಳ್ಳ ಮತ್ತು ಬೆಲ್ಲದ್ ಅವರು ಮನವಿಕೊಟ್ಟರು, ಆಗ ಒಂದು ಭರವಸೆಯನ್ನು ಕೊಟ್ಟಿದ್ದು ನಿಜ. ಹಿಂದಿನ ಸರ್ಕಾರದವರು ಇದರ ಬಗ್ಗೆ ಏನೂ ತೀರ್ಮಾನ ಮಾಡಲಿಲ್ಲ. ನಾವು ಬಂದಮೇಲೆ ಈ ವಿಚಾರ ಬಂತು. ಇದರ ಬಗ್ಗೆ ಇನ್ನೂ ತೀರ್ಮಾನ ತೆಗೆದುಕೊಳ್ಳಬೇಕಾಗಿದೆ. ಕಿತ್ತೂರಿನಲ್ಲಿ ಒಂದು ಪ್ರತಿಮೆ ಸ್ಥಾಪನೆ

ಮಾಡಬೇಕು ಎಂದು ಇದೆ. ಬೆಳಗಾಂದಲ್ಲಿ ಒಂದೇ ಇದೆ. ಈಗ ಕಿತ್ತೂರಿನಲ್ಲಿ, ಬೆಂಗಳೂರಿನಲ್ಲಿ ಮತ್ತು ಡೆಲ್ಲಿಯಲ್ಲೂ ಕೂಡ ಮಾಡಬೇಕು. ಈ ಮೂರೂ ಕಡೆಗೆ ಸ್ಥಾಪನೆ ಮಾಡತಕ್ಕಂಥಾದ್ದು ಸೂಕ್ತವೋ ಅಥವಾ ಯಾವ ಕಡೆಗೆ ಮಾಡಿದರೆ ಒಳ್ಳೆಯದು ಎಂದು ಹೇಳುವುದರ ಬಗ್ಗೆ ಸರ್ಕಾರ ತೀರ್ಮಾನ ಮಾಡುತ್ತದೆ. ಆ ಮೇಲೆ ಅವರ ವಂಶಜರಿಗೆ ಶಾಶ್ವತವಾದ ಪರಿಹಾರ ಅಂದರೆ ಪೆನ್‌ಷನ್ ಕೊಡಬೇಕು ಎಂಬ ಸೂಚನೆ ಇದೆ. ಕೆಲವು ದಿನಗಳ ಹಿಂದೆ ಅವರು ನನ್ನನ್ನು ಭೆಟ್ಟಿಯಾಗಿದ್ದರು. ಟಿಪ್ಪು ಸುಲ್ತಾನ್ ವಂಶಜರೂ ಕೂಡ ಇದೇರೀತಿ ಕೇಳುತ್ತಾ ಇದ್ದಾರೆ. ಇದರ ಬಗ್ಗೆ ಆದಷ್ಟು ಬೇಗ ನಾವು ಒಂದು ತೀರ್ಮಾನವನ್ನು ತೆಗೆದುಕೊಳ್ಳುತ್ತೇವೆ.

ಶ್ರೀ ಎಂ. ವಿಸ್. ಪಾಟೀಲ್.—ಈಗಾಗಲೇ ಬೆಳಗಾಂನಲ್ಲಿ ಒಂದು ಪ್ರತ್ಯಳಿಯನ್ನು ಹಾಕಿದ್ದಾರೆ. ಸಾರ್ವಜನಿಕರಿಂದ ದಂತಿಗೆಯನ್ನು ಪಡೆದು ಆ ಪುತ್ಥಳಿಯನ್ನು ಹಾಕಿದ್ದಾರೆ. ರಾಣಿ ಚೆನ್ನಮ್ಮನ ಬಗ್ಗೆ ರಾಜ್ಯಮಟ್ಟದಲ್ಲಿ ತಿಳುವಳಿಕೆ ಇರಬಹುದು. ಆದರೆ ದೇಶದಲ್ಲಿ ಪ್ರಪ್ರಥಮ ಮಹಿಳೆಯಾದಂಥ ಚೆನ್ನಮ್ಮನ ಬಗ್ಗೆ ಭಾವನೆ ಮೂಡಬೇಕಾದರೆ ಮುಂದಿನ ಜನಗಳಿಗೆ ತಿಳುವಳಿಕೆ ಬರಬೇಕಾದರೆ ಇಂಥ ಒಂದು ಪ್ರತಿಮೆಯ ಚಿತ್ರ ಬರಬೇಕಾಗಿದೆ. ಆದುದರಿಂದ ಈ ಮೂರೂ ಕಡೆಗೆ ತಾವು ಪುತ್ಥಳಿಗಳ ನಿರ್ಮಾಣ ಕಾರ್ಯವನ್ನು ತೆಗೆದುಕೊಳ್ಳಬೇಕು ಎಂದು ಸೂಚನೆ ಮಾಡುತ್ತೇನೆ.

ಶ್ರೀ ರಾಮಕೃಷ್ಣ ಹೆಗಡೆ.—ಮಾನ್ಯ ಅಧ್ಯಕ್ಷರೆ, ನನ್ನ ಸ್ವಂತ ಅಭಿಪ್ರಾಯವನ್ನು ಇಲ್ಲಿ ಹೇಳುವುದಾದರೆ ಡೆಲ್ಲಿಯಲ್ಲಿ ರಾಣಿ ಚೆನ್ನಮ್ಮನ ಪ್ರತಿಮೆಯನ್ನು ಸ್ಥಾಪನೆ ಮಾಡತಕ್ಕಂಥಾದು ಯೋಗ್ಯ. ಆದರೆ ಕರ್ನಾಟಕ ಭವನವು ಮುಂದೆ ಮಾಡಿದರೆ ಅದಕ್ಕೆ ಆಕ್ಷೇಪಣೆ ಇರಲಿಕ್ಕಿಲ್ಲ, ಆಲ್ಲಿ ಅಷ್ಟು ಜಾಗವೂ ಇಲ್ಲ. ಆದುದರಿಂದ ಈ ಬಗ್ಗೆ ಪ್ರಧಾನಮಂತ್ರಿಗಳಿಗೆ ಬರೆಯುತ್ತೇನೆ. ಡೆಲ್ಲಿಯಲ್ಲಿ ಕೇಂದ್ರ ಸರ್ಕಾರದವರು ಈ ಬಗ್ಗೆ ಒಂದು ನಿರ್ಧಾರ ತೆಗೆದುಕೊಳ್ಳಬೇಕು ಅಥವಾ ಅವರು ನಮಗೆ ಸೂಕ್ತವಾದ ಜಾಗ ಕೊಟ್ಟರೆ ಪುತ್ಥಳಿಯ ಖರ್ಚನ್ನು ನಾವು ಮಿಸಬಹುದು, ಇದರ ಬಗ್ಗೆ ಪ್ರಧಾನಮಂತ್ರಿಗಳಿಗೆ ಬರೆಯುತ್ತೇನೆ.

ಶ್ರೀ ಜೆ. ಗಂಗಾಧರನ್.—ಮಾನ್ಯ ಅಧ್ಯಕ್ಷರೆ, ಮದ್ರಾಸಿನಲ್ಲಿ ಸಮುದ್ರ ತೀರದಲ್ಲಿ ಪ್ರಮುಖ ವ್ಯಕ್ತಿಗಳ ಪ್ರತಿಮೆಗಳನ್ನು ಮಾಡಿ ನಿಲ್ಲಿಸಿದ್ದಾರೆ. ಆದೇರೀತಿ ನಮ್ಮಲ್ಲಿ ಮೈಸೂರಿನ ಅರಮನೆ ಮುಂದೆ ಇರತಕ್ಕ ಜಾಗವನ್ನು ಸರ್ಕಾರ ವಶಪಡಿಸಿಕೊಂಡು ಇಂಥವರ ಮತ್ತು ಮಹಾ ಕವಿಗಳಾದ ಸರ್ವಜ್ಞ ಮುಂತಾದವರ ಪ್ರತಿಮೆಗಳನ್ನು ಮಾಡಿ ನಿಲ್ಲಿಸಿ, ಅದನ್ನು ಆಕರ್ಷಣೀಯವಾಗಿ, ಪ್ರೇಕ್ಷಣೀಯ ಸ್ಥಳವನ್ನಾಗಿ ಮಾಡುವುದಕ್ಕೆ ಸರ್ಕಾರ ಪ್ರಯತ್ನ ಮಾಡುತ್ತಿದೆಯೇ ?

ಶ್ರೀ ರಾಮಕೃಷ್ಣ ಹೆಗಡೆ.—ಬೆಂಗಳೂರಿನಲ್ಲಿ ಸಮುದ್ರ ತೀರ ಇದ್ದಿದ್ದರೆ ಆ ರೀತಿ ಮಾಡಲು ಬಹುದಾಗಿತ್ತು. ಈಗ ಪ್ಯಾಲೆಸ್ ಗ್ರೌಂಡ್ಸ್ ಒಂದು ಕಡೆ ಇದೆ. ಯಾರಾದರೂ ಆಲ್ಲಿಗೆ ಹೋಗುವುದಾದರೆ ಪುತ್ಥಳಿಗಳನ್ನು ನೋಡಲಿಕ್ಕೆ ಹೋಗಬೇಕು. ಮದ್ರಾಸಿನಲ್ಲಿ ಹೋದಾಗ ಅದು ಬಹಳ ದೊಡ್ಡ ಮಹತ್ವವಾದಂಥ ಬೀದಿ. ಪ್ರತಿ ದಿವಸ ಜನಗಳು ಹೋಗುತ್ತಾರೆ. ಆಲ್ಲಿನವರು ಮತ್ತು ಹೊರಗಡೆಯವರೂ ಹೋಗುತ್ತಾರೆ. ಅದು ಉತ್ತಮವಾದಂಥ ಸ್ಥಳ. ಸುಮಾರು ಇಪ್ಪತ್ತೈದು ಮೈಲಿ ದೂರ ಉದ್ದವಿದೆ. ಆಲ್ಲಿ ೧೦—೨೦—೩೦ ಪುತ್ಥಳಿಗಳನ್ನು ಮಾಡಿದರೂ ಕೂಡ ಕೊಂಚವೆ ಕಾಣುವುದಿಲ್ಲ. ಆದರೆ ನಮ್ಮಲ್ಲಿ ವಿಧಾನ ಸೌಧದ ಎದುರಿಗೆ ವಿವಂಗತ ಹನುಮಂತಯ್ಯನವರ ಪುತ್ಥಳಿ ಬೇಕು ಎಂದು ಹೇಳುತ್ತಾರೆ. ಮಾನ್ಯ ದೇವರಾಜ ಅರಸ್ ಅವರ ಪುತ್ಥಳಿಯನ್ನು ಹಾಕಬೇಕು ಎಂದು ಸೂಚನೆ ಮಾಡಿದ್ದಾರೆ, ಮತ್ತೆ ರಾಣಿ ಚೆನ್ನಮ್ಮನ ಪುತ್ಥಳಿಯನ್ನು ಸಹ ಹಾಕಬೇಕು ಎಂದು ಸೂಚನೆ ಮಾಡಿದ್ದಾರೆ. ಇನ್ನೂ ಅನೇಕ ಹಿಂದೆ ಆಗಿಹೋದಂಥ ಸಾಮಂತರ ಪುತ್ಥಳಿಗಳನ್ನು ಸ್ಥಾಪನೆ ಮಾಡಬೇಕು ಎಂದು ಸೂಚನೆ ಬಂದಿದೆ. ಅದೆಲ್ಲದನ್ನೂ ಮಾಡಿದರೆ ಇಲ್ಲೂ ಕೂಡ ಸಾಕಷ್ಟು ಜಾಗ ಇರಲಿಕ್ಕಿಲ್ಲ.

ಶ್ರೀ ಬಿನ್ ಹುಚ್ಚಮಾಸ್ತಿಗೌಡ.—ಯಾವ ವಿಷಯದ ಪ್ರತಿಮೆಗಳನ್ನು ನಿರ್ಮಾಣ ಮಾಡುವ ಬಗ್ಗೆ ಮೊದಲು ನಿರ್ಧಾರ ಮಾಡಿದರೆ ಒಳ್ಳೆಯದು, ಇಲ್ಲದೆ ಹೋದರೆ, ಬೇರೆ ಬೇರೆ ಜನಗಳಿಂದ ಬೇಡಿಕೆ ಬರುವುದರಿಂದ ಸರ್ಕಾರಕ್ಕೆ ತೀರ್ಮಾನ ಮಾಡುವುದು ಕೊಂಚ ಕಷ್ಟವಾಗಬಹುದು. ಒಂದು ಪಟ್ಟಿಯನ್ನು ತಯಾರು ಮಾಡಿ ನಿರ್ಣಯ ಮಾಡಿದರೆ ಮುಂದಿನವರಿಗೆ ಸಾಧ್ಯವಾಗುವುದು ?

ಶ್ರೀ ರಾಮಕೃಷ್ಣ ಹೆಗಡೆ.—ಈಗಲೇ ಪಟ್ಟಿ ಮಾಡುವುದು ಹೇಗೆ ಸಾಧ್ಯ. ಸಾಮಾನ್ಯವಾದ ಪದ್ಧತಿ ಇರುವುದು ಯಾವ ವ್ಯಕ್ತಿ ಜೀವಂತವಾಗಿರುತ್ತಾರೆ, ಅಂಥವರ ಪುತ್ಥಳಿಯನ್ನು ಕೂಡಿಸುವುದಿಲ್ಲ. ಜೀವಂತವಾಗಿ ಇರುವಂಥ ವ್ಯಕ್ತಿಗಳ ಪುತ್ಥಳಿ ಮಾಡಿಕೂಡಿಸಿದ್ದು ಉಂಟು. ಮತ್ತೆ ಅದನ್ನು ಹೊಡೆಸಿ ಹಾಕಿದ್ದು ಉಂಟು. ರಷ್ಯಾದ ಕ್ರೈಮಿಲಿನಲಿ ಕಮ್ಯುನಿಷ್ಟ್ ಪಕ್ಷದ ಪ್ರಥಮ ಕಾರ್ಯದರ್ಶಿಯಾದವರು ತೀರಿಕೊಂಡಮೇಲೆ ಪುತ್ಥಳಿಯನ್ನು ಕೋಟೆಯ ಪಕ್ಕದಲ್ಲಿ ಸ್ಥಾಪನೆ ಮಾಡುವಂಥ ನಿರ್ಣಯ ಇಟ್ಟು ಕೊಂಡಿದ್ದರು. ಅದರಂತೆ ಸ್ಟಾಲಿನ್ ಪ್ರತಿಮೆ ಹಾಕಿದರು. ಕ್ರುಶ್ಚೆವ್ ಬಂದ ಮೇಲೆ ಅದನ್ನು ತೆಗೆದರು. ಅದು ಎಲ್ಲಿ ಬಿದ್ದಿದೆಯೋ ಗೊತ್ತಿಲ್ಲ. ಜನತೆಗೆ ಯಾರ ಬಗ್ಗೆ ಅತ್ಯಂತ ಒಳ್ಳೆಯ ಅಭಿಪ್ರಾಯ ಇರುತ್ತದೆಯೋ ? ದೇಶಕ್ಕೆ ಹಾಗೂ ರಾಜ್ಯಕ್ಕೆ ಯಾರು ಒಳ್ಳೆಯ ಸೇವೆ ಸಲ್ಲಿಸಿರುತ್ತಾರೆಯೋ ಅಂಥವರ ಪ್ರತಿಮೆಗಳನ್ನು ಹಾಕಿದರೆ ಯಾರೂ ಬಂದು ತೆಗೆದು ಹಾಕತಕ್ಕಂಥ ಪ್ರಮೇಯ ಬರುವುದಿಲ್ಲ.

ಜೈಲು ಇಲಾಖೆಯಲ್ಲಿರುವ ಸಿಬ್ಬಂದಿಗೆ ತೊಂದರೆ,

ಳಷಿ (೧೪೫) ಶ್ರೀ ಕೆ. ವಸಂತ ಬಂಗೇರ (ಬೆಳ್ತಂಗಡಿ)

ಈ ಕೆಳಕಂಡ ಪ್ರಶ್ನೆಗಳಿಗೆ ಮಾನ್ಯ ಗೃಹ ಸಚಿವರು ದಯಯಿಟ್ಟು ಉತ್ತರಿಸುವರೆ ?

ಅ) ಜೈಲು ಇಲಾಖೆಯ ಸಿಬ್ಬಂದಿಗಳ ಕುಂದು ಕೊರತೆಗಳು ಸರ್ಕಾರದವರ ಗಮನಕ್ಕೆ ಬಂದಿದೆಯೇ ?

ಆ) ಕುಂದುಕೊರತೆಗಳ ನಿವಾರಣೆ ಬಗ್ಗೆ ಸರ್ಕಾರ ಯಾವ ಕ್ರಮವನ್ನು ಕೈಗೊಂಡಿದೆ ?

ಶ್ರೀ ರಮೇಶ್ ಜಿಗಜಿನಗಿ (ಮಾನ್ಯ ರಾಜ್ಯ ಗೃಹ ಸಚಿವರು)

ಅ) ಕೆಲವು ಕುಂದುಕೊರತೆಗಳು ಸರ್ಕಾರದ ಗಮನಕ್ಕೆ ಬಂದಿವೆ.

ಆ) ಈ ಕೆಳಕಂಡ ಕುಂದುಕೊರತೆಗಳನ್ನು ಸರ್ಕಾರವು ನಿವಾರಿಸಿದೆ.—

೧. ಉಚಿತ ಸಮವಸ್ತ್ರ ಮತ್ತು ಸಮವಸ್ತ್ರ ಭತ್ಯ ನೀಡಲಾಗಿದೆ.

೨. ಸಮವಸ್ತ್ರ ಶುಚಿಗೊಳಿಸಲು ಭತ್ಯ ಮತ್ತು ಸಮವಸ್ತ್ರ ಪೋಷಣೆ ಭತ್ಯ ನಿಡಲಾಗಿದೆ.

೩. ಹಂತ ಹಂತವಾಗಿ ಜೈಲು ಸಿಬ್ಬಂದಿಗೆ ವಸತಿ ಗೃಹ ನಿರ್ಮಾಣ ಕಾರ್ಯ ಕೈಗೊಳಲಾಗಿದೆ.

೪. ಗುಲ್ಬರ್ಗ ಕೇಂದ್ರ ಕಾರಾಗೃಹ ಸಿಬ್ಬಂದಿಯ ಬೇಡಿಕೆಯಂತೆ ನಗರ ಮತ್ತು ಕಾರಾಗೃಹಗಳ ಮಧ್ಯೆ ಸಾರಿಗೆ ಸಂಪರ್ಕ ಒದಗಿಸಲಾಗಿದೆ.

೫. ಗೆಜೆಟೆಡ್ ರಜೆಯನ್ನು ಉಪಯೋಗಿಸಿಕೊಳ್ಳಲಾಗದ್ದಕ್ಕೆ ವರ್ಷಕ್ಕೆ ೧೫ ದಿನಗಳ ಹೆಚ್ಚಿನ ಸಂಬಳವನ್ನು ಹಾಗೂ ವಾರದ ರಜೆ ಬದಲಾಗಿ ದಿನ ಭತ್ಯವನ್ನು ಕೊಡಲಾಗುತ್ತಿದೆ.

ಶ್ರೀ ಕೆ. ವಸಂತ ಬಂಗೇರ,—ಮಾನ್ಯ ಅಧ್ಯಕ್ಷರೇ, ಮಂಗಳೂರು ಜೈಲು ಅಧಿಕಾರಿಗಳು ಕೆಳದರ್ಜೆ ನೌಕರರಿಗೆ ಬಹಳ ತೊಂದರೆ ಕೊಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ? ದೂರುಗಳು ಬಂದಿದ್ದರೂ ಸರ್ಕಾರದವರು ಕ್ರಮ ಏತಕ್ಕೆ ಕೈಗೊಂಡಿಲ್ಲ ? ಮಂಗಳೂರು ಜೈಲಿನಲ್ಲಿ ಒಬ್ಬ ಪೈದಿ ಜೈಲಾಧಿಕಾರಿಯ ತಪ್ಪಿನಿಂದ ತಪ್ಪಿಸಿಕೊಂಡು ಹೋದ. ಇವರು ಕೆಳಗಿನ ಕಾನ್‌ಸ್ಟೇಬಲ್‌ಗೆ ತೊಂದರೆ ಕೊಟ್ಟಿದ್ದಾರೆ, ಇದರ ಬಗ್ಗೆ ಏನು ಕ್ರಮ ತೆಗೆದುಕೊಂಡಿದ್ದೀರಿ ? ಈ ವಿಚಾರದಲ್ಲಿ ತನಿಖೆ ಮಾಡುತ್ತೀರಾ ?

ಶ್ರೀ ರಮೇಶ್ ಜಿಗಜಿನಗಿ —ಮಾನ್ಯ ಸಭಾಪತಿಯವರೇ, ಸರ್ಕಾರಕ್ಕೆ ಯಾವ ರೀತಿಯ ದೂರು ಗಳೂ ಬಂದಿಲ್ಲ. ವಿವರಗಳನ್ನು ಕೊಟ್ಟರೆ ತನಿಖೆ ಮಾಡಿಸುತ್ತೇನೆ.

ಹೋಟೇಲುಗಳಿಂದ ಹಿಂದಿನ ವರ್ಷದ ಮಾರಾಟಕರ ವಸೂಲಿ ಬಗ್ಗೆ.

ಳಷಿ (೧೪೬) ಶ್ರೀ ಡಾ. ವಿ. ಎಸ್. ಆಚಾರ್ಯ (ಉಡುಪಿ) ಈ ಕೆಳಕಂಡ ಪ್ರಶ್ನೆಗಳಿಗೆ ಮಾನ್ಯ ಮುಖ್ಯಮಂತ್ರಿಗಳು ದಯಯಿಟ್ಟು ಉತ್ತರಿಸುವರೆ ?

ಅ) ಹಿಂದೆ ಸುಪ್ರೀಂ ಕೋರ್ಟ್ ೧೯೭೮ರಲ್ಲಿ ಮಾರಾಟ ತೆರಿಗೆ ವ್ಯಾಪ್ತಿಯಲ್ಲಿ ಹೋಟೇಲುಗಳು ಬರುವುದಿಲ್ಲ ಎಂದು ತೀರ್ಪು ನೀಡಿದ ನಂತರ ಸಂಸತ್ತು ಸಂವಿಧಾನದ (೪೬)ನೇ ತಿದ್ದುಪಡಿಯ ಮೂಲಕ